• ರೈತರಿಗೆ ತರಬೇತಿ ನೀಡುವ ಮೂಲಕ ಅರಿವು ಮೂಡಿಸಲಾಗುತ್ತಿದೆ.

• ವಿವಿಧ ಬೆಳೆಗಳ ಬಗ್ಗೆ ಅಂತರ ರಾಷ್ಟ್ರೀಯ ವಿಚಾರ ಸಂಕಿರಣಗಳನ್ನು ಏರ್ಪಡಿಸಿ ಇತ್ತೀಚಿನ ಸಸ್ಯ ಸಂರಕ್ಷಣಾ ಸಂಶೋಧನೆಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ರೈತರಿಗೆ ಹಾಗೂ ಅಧಿಕಾರಿಗಳಿಗೆ ಒದಗಿಸಲಾಯಿತು.

• ರೋಗಗಳ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣಾ ಔಷಧಿಗಳನ್ನು ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ.

• ಆರೋಗ್ಯ ಸುಧಾರಣೆ ಹಾಗೂ ನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಮಗ್ರ ಬೇಸಾಯ ಕ್ರಮಗಳ ಪ್ರಾತ್ಯಕ್ಷತೆಯನ್ನು ಏರ್ಪಡಿಸಲಾಗುತ್ತಿದೆ. ಸಾವಯವ ಬೇಸಾಯ ಹಾಗೂ ಜೈವಿಕ ನಿಯಂತ್ರಣಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದೆ.

• ತೆಂಗಿನ ಗರಿ ತಿನ್ನುವ ಕಪ್ಪು ತಲೆ ಹುಳುವಿನ ನಿಯಂತ್ರಣಕ್ಕಾಗಿ ಪರೋಪಜೀವಿಗಳನ್ನು ಉತ್ಪಾದಿಸಿ ಉಚಿತವಾಗಿ ರೈತರಿಗೆ ಒದಗಿಸಲಾಗುತ್ತಿದೆ

ಇ) ಇಂತಹ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಆದಾಗ್ಯೂ, ಕರ್ನಾಟಕ ರಾಜ್ಯದ ವಿವಿಧ ಭಾಗಗಳಲ್ಲಿ ಕೇಂದ್ರ ಸರ್ಕಾರದಿಂದ ಹಾಗೂ ಕೃಷಿ ವಿಶ್ವ ವಿದ್ಯಾನಿಲಯ ವತಿಯಿಂದ ಸಂಶೋಧನಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ತೋಟಗಾರಿಕೆ ಇಲಾಖೆಯು ಅನುದಾನ ಒದಗಿಸಿ ವಿಶೇಷ ಸಮಸ್ಯೆಗಳ ಅಧ್ಯಯನ ಮತ್ತು ಪರಿಹಾರ ಕಂಡುಕೊಳ್ಳಲು ಸಂಶೋಧನೆಗೆ ನೆರವು ಒದಗಿಸುತ್ತಿದೆ.

**ವಿಶ್ವೇಶರಯ್ಯ ನಾಲಾ ಬಯಲಿನ ಅಚ್ಚುಕಟ್ಟು ಪ್ರದೇಶಗಳಲ್ಲಿ ಐ.ಟಿ. ರಸ್ತೆಗಳ ಅಭಿವೃದ್ಧಿ**

4652 (5436) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಶ್ವೇಶ್ವರಯ್ಯ ನಾಲಾ ಬಯಲಿನ ಅಚ್ಚುಕಟ್ಟು ಪ್ರದೇಶದಲ್ಲಿನ ಹಾಗೂ ಮಂಡ್ಯ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಜಿಲ್ಲಾ ಸಂಪನ್ಮೂಲ ಇಲಾಖೆಯಿಂದ ಸೇರ್ಪಡೆಯಾಗಿರುವ, ಐ.ಟಿ.ರಸ್ತೆಗಳು ಸಮರ್ಪಕ ನಿರ್ವಹಣೆಯಿಲ್ಲದೇ, ರೈತರ ಕೃಷಿ ಚಟುವಟಿಕೆಗಳಿಗೆ ತೊಂದರೆಯಾಗುತ್ತಾ ಇರುವುದನ್ನು ಗಮನಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ವಿ.ಸಿ. ಬಯಲಿನ ಐ.ಟಿ. ರಸ್ತೆಗಳನ್ನು ಅಭಿವೃದ್ಧಿ ಮಾಡಲು ಸಮಗ್ರವಾಗಿ ಜಲ ಸಂಪನ್ಮೂಲ ಇಲಾಖೆಯ ವ್ಯಾಪ್ತಿಗೆ ಒಳಪಡಿಸಿ ಕಾವೇರಿ ನೀರಾವರಿ ನಿಗಮದ ಮುಖಾಂತರ ಅಭಿವೃದ್ಧಿಪಡಿಸುವ ಅವಶ್ಯಕತೆಯನ್ನು ಮನಗಂಡಿದೆಯೇ;

ಇ) ಹಾಗಿದ್ದಲ್ಲಿ, ಈ ಬಗೆಗೆ ಕೈಗೊಳ್ಳಲಾಗುವ ಕ್ರಮಗಳೇನು?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ವಿಶ್ವೇಶ್ವರಯ್ಯ ನಾಲಾ ಬಯಲಿನ ಅಚ್ಚುಕಟ್ಟು ಪ್ರದೇಶದಲ್ಲಿನ 2105.70 ಕಿ.ಮೀ. ಐ.ಟಿ. ರಸ್ತೆಗಳನ್ನು ಜಲ ಸಂಪನ್ಮೂಲ ಇಲಾಖೆಯಿಂದ ಜಿಲ್ಲಾ ಪಂಚಾಯತ್‌ಗೆ ಸರ್ಕಾರದ ಆದೇಶ ಸಂಖ್ಯೆ:ಪಿಡಬ್ಲ್ಯೂಡಿ 52 ಸಿಆರ್‌ಎಂ 85, ದಿನಾಂಕ:27-04-87ರಲ್ಲಿ ಹಸ್ತಾಂತರಿಸಲಾಗಿದೆ. ಈ ರಸ್ತೆಗಳ ನಿರ್ವಹಣೆ ಜಿಲ್ಲಾ ಪಂಚಾಯತ್ ವತಿಯಿಂದ ಕೈಗೊಳ್ಳಲಾಗುತ್ತಿದೆ. ಜಲ ಸಂಪನ್ಮೂಲ ಇಲಾಖೆಯಡಿ 687.15 ಕಿ.ಮಿ. ಉದ್ದದ ಐ.ಟಿ. ರಸ್ತೆಗಳ ನಿರ್ವಹಣೆ ಕೈಗೊಳ್ಳಲಾಗುತ್ತಿದೆ. ಜಲ ಸಂಪನ್ಮೂಲ ಇಲಾಖೆಯಡಿ ಒದಗಿಸಲಾಗುತ್ತಿರುವ ಲೆಕ್ಕ ಶೀರ್ಷಿಕೆ 3054 ಅಡಿ ಅನುದಾನ ಲಭ್ಯತೆ ಅನುಸಾರ ನಿರ್ವಹಣೆ ಕೈಗೊಳ್ಳಲಾಗುತ್ತಿದೆ.

ಆ) ಮನಗಂಡಿದೆ.

ಇ) ಕಾವೇರಿ ನೀರಾವರಿ ನಿಗಮಕ್ಕೆ ಕಾಮಗಾರಿಗಳನ್ನು ಹಸ್ತಾಂತರಿಸಲಾಗಿದೆ. ರಸ್ತೆಗಳ ನಿರ್ವಹಣೆಯನ್ನು ಕೈಗೆತ್ತಿಕೊಂಡು ರೈತರ ಕೃಷಿ ಚಟುವಟಿಕೆಗಳಿಗೆ ಯಾವುದೇ ರೀತಿ ತೊಂದರೆಯಾಗದಂತೆ ನಿರ್ವಹಿಸಲು ಕ್ರಮ ಕೈಗೊಳ್ಳಲಾಗುವುದು.

**ಮಂಡ್ಯ ಜಿಲ್ಲೆಯಲ್ಲಿ ರೈತ ಬಜಾರುಗಳ ಪ್ರಾರಂಭ**

4653 (5437) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ರೈತ ಬಜಾರುಗಳನ್ನು ಪ್ರಾರಂಭಿಸುವ ಕಾರ್ಯಕ್ರಮದಡಿ ಈವರೆವಿಗೆ ಕಾರ್ಯೋನ್ಮುಖವಾಗಿರುವ ರೈತ ಬಜಾರುಗಳ ಸಂಖ್ಯೆ ಎಷ್ಟು, ಇವುಗಳನ್ನು ಎಲ್ಲೆಲ್ಲಿ ಆರಂಭಿಸಲಾಗಿದೆ;

ಆ) ಈ ರೈತ ಬಜಾರುಗಳು ರೈತರಿಗೆ, ತಮ್ಮ ಉತ್ಪನ್ನಗಳನ್ನು ಮಾರುವಾಗ ಆಗುತ್ತಿದ್ದ ಶೋಷಣೆಯನ್ನು ತಪ್ಪಿಸುವ ದಿಸೆಯಲ್ಲಿ ಪರಿಣಾಮಕರವಾಗಿದೆಯೇ; ರೈತರಿಗೆ ತಮ್ಮ ಕೃಷಿ ಉತ್ಪನ್ನಗಳನ್ನು ಮಾರುವಲ್ಲಿ ಲಾಭ ದೊರೆಕುತ್ತಿದೆಯೇ;

ಇ) ಮಂಡ್ಯ ಜಿಲ್ಲೆ ಕೃಷಿ ಪ್ರಧಾನವಾಗಿದ್ದ, ಇಲ್ಲಿ ಯಾವುದೇ ರೈತ ಬಜಾರುಗಳನ್ನು ಆರಂಭಿಸದೇ ಇರಲು ಕಾರಣವೇನು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು):

ಅ) ರಾಜ್ಯದಲ್ಲಿ ಪ್ರಸ್ತುತ 3 ರೈತರ ಸಂತೆಗಳನ್ನು ಪ್ರಾರಂಭ ಮಾಡಲಾಗಿದ್ದು, ವಿವರ ಕೆಳಕಾಣಿಸಿದಂತಿದೆ.

1. ಬೆಂಗಳೂರು ನಗರ ಜಿಲ್ಲೆ – ಯಲಹಂಕ
2. ಧಾರವಾಡ ಜಿಲ್ಲೆ – ಹುಬ್ಬಳ್ಳಿ
3. ಚಿತ್ರದುರ್ಗ ಜಿಲ್ಲೆ – ಚಿತ್ರದುರ್ಗ

ಆ) ಹಣ್ಣು ಮತ್ತು ತರಕಾರಿ ಬೆಳೆಯುವ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಿ ಉತ್ತಮ ಧಾರಣೆ ಪಡೆಯುವ ರೈತ ಸಂತೆ ಸ್ಥಾಪನೆಯ ಉದ್ದೇಶ ಈಡೇರಿಕೆಯಲ್ಲಿ ಬಹುತೇಕ ಯಶಸ್ಸು ಸಾಧಿಸಲಾಗಿದೆ.

ಇ) ರಾಜ್ಯದಲ್ಲಿನ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ರೈತರ ಸಂತೆ ಸ್ಥಾಪಿಸುವ ಸಂಬಂಧ ಕಾರ್ಯ ಸಾಧ್ಯತೆ ವರದಿ ನೀಡಲು ಕೃಷಿ ವಿಶ್ವವಿದ್ಯಾಲಯ ಬೆಂಗಳೂರು ಮತ್ತು ಧಾರವಾಡ ಇವರಿಗೆ ವಹಿಸಲಾಗಿದೆ. ಸದರಿಯವರಿಂದ ಬರುವ ವರದಿ ಪರಿಶೀಲಿಸಿ, ರೈತರ ಸಂತೆ ಸ್ಥಾಪನೆಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

**ಧಾರವಾಡ ತಾಲ್ಲೂಕಿನಲ್ಲಿ ಸುಫಲ ಜಲಾನಯನ ಕಾರ್ಯಕ್ರಮ**

4655 (5418) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುಜಲ ಜಲಾನಯನ ಕಾರ್ಯಕ್ರಮ ರಾಜ್ಯದ ಯಾವ ಜಿಲ್ಲೆಗಳ ತಾಲ್ಲೂಕುಗಳ ಪ್ರದೇಶಗಳಲ್ಲಿ ಆಯ್ದುಕೊಳ್ಳಲಾಗಿದೆ (ವಿವರ ನೀಡುವುದು)

ಆ) ಧಾರವಾಡ ತಾಲ್ಲೂಕಿನ ಗ್ರಾಮಗಳಲ್ಲಿ ಈ ಕಾರ್ಯಕ್ರಮ ಪ್ರಾರಂಭವಾಗಿದೆಯೆ ಮತ್ತು ರೈತ ಗುಂಪುಗಳು ನಿರ್ಮಿಸಿರುವ ಈ ಕಾರ್ಯಕ್ರಮಕ್ಕೆ ಅವರಿಗೆ ಈವರೆಗೆ ನೀಡಿರುವ ಹಣದ ವಿವರ ನೀಡುವುದು.